# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –145ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಹೊಂಬೇಗೌಡನಗರ ವಾರ್ಡ್–145 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರಾದ ಶ್ರೀಮತಿ. ಲಕ್ಷ್ಮೀದೇವಿ ಆರ್. ಉಪ ಆಯುಕ್ತರು ಕಂದಾಯ (ದಕ್ಷಿಣ) ರವರ ಅಪ್ಪಣೆ ಮೇರೆಗೆ ದಿನಾಂಕ:06/06/2022ರ ಸೋಮವಾರದಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಉಪ ಆಯುಕ್ತರು (ದಕ್ಷಿಣ) ಹಾಗೂ ವಾರ್ಡ್ 145ರ ನೋಡಲ್ ಅಧಿಕಾರಿ.
2. ಕೆಲಸ ಪರಿವೀಕ್ಷಕರು ವಾರ್ಡ್–145.
3. ಕಿರಿಯ ಇಂಜಿನಿಯರ್ (ವಿದ್ಯುತ್ ವಿಭಾಗ ಬಿಬಿಎಂಪಿ).
4. ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ ಕಾನೂನು ಸುವ್ಯವಸ್ಥೆ ವಾರ್ಡ್ 145.
5. ಸಹಾಯಕ ಇಂಜಿನಿಯರ್ (BWSSB).
6. ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ ಸಂಚಾರ ವಾರ್ಡ್ 145.
7. ನಾಗರೀಕ ಕಲ್ಯಾಣ ಸಂಘದ ಸದಸ್ಯರು ಮತ್ತು ಸಾರ್ವಜನಿಕರು.

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಪೊಲೀಸ್ ಇಲಾಖೆ ಅಧಿಕಾರಿಗಳು (ಕಾನೂನು ಸುವ್ಯವಸ್ಥೆ) ಆಡುಗೋಡಿ.
2. ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–145.
3. ತೋಟಗಾರಿಕೆ ಇಲಾಖೆ, ಮೇಲ್ವಿಚಾರಕರು ವಾರ್ಡ್ 145.
4. ಸಹಾಯಕ ಇಂಜಿನಿಯರ್ (ಬೆಸ್ಕಾಂ).
5. ಅರಣ್ಯ ಇಲಾಖೆಯ ಅಧಿಕಾರಿಗಳು.
6. ಸ.ಕಾ.ನಿ. ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ, ಬಿಬಿಎಂಪಿ ಕೇಂದ್ರ ಕಛೇರಿ.
7. ಸ.ಕಾ.ನಿ. ಅಭಿಯಂತರರು, ಯೋಜನೆ–ಕೇಂದ್ರ, ಬಿಬಿಎಂಪಿ ಕೇಂದ್ರ ಕಛೇರಿ.

**********



Scanned with CamScanner

1. ವಾರ್ಡ್ ವ್ಯಾಪ್ತಿಯ ವಿಲ್ಸನ್‌ಗಾರ್ಡನ್ 9ನೇ "ಎ" ಅಡ್ಡರಸ್ತೆಯಲ್ಲಿ ಇರುವ ಸಬ್‌ಮೇನ್ ಮ್ಯಾನ್‌ಹೋಲ್‌ಗಳನ್ನು ಎತ್ತರಿಸಿದ ನಂತರ ಕಾಂಕ್ರಿಟ್ ರಸ್ತೆ ಕಾಮಗಾರಿಯನ್ನು ಪ್ರಾರಂಭಿಸಲು, ಶ್ರೀ. ಮಲ್ಲಿಕಾರ್ಜುನ್ ರವರು ಸಭೆಯಲ್ಲಿ ಕೋರಿದರು–ಈ ವಿಷಯವಾಗಿ ವಾರ್ಡಿನ ಅಭಿಯಂತರರು ಮಾತನಾಡಿ ಒಪ್ಪಿಗೆ ಸೂಚಿಸಿದರು.

2. ವಾರ್ಡ್ ವ್ಯಾಪ್ತಿಯ ವಿಲ್ಸನ್‌ಗಾರ್ಡನ್‌ನಲ್ಲಿ ಸರಿಯಾಗಿ ಮಳೆನೀರಿನ ಚರಂಡಿಯ ವ್ಯವಸ್ಥೆ ಇಲ್ಲದಿರುವ ಬಗ್ಗೆ ಚರ್ಚಿಸಲಾಯಿತು–ಸಂಬಂಧಿಸಿದಂತೆ ಯೋಜನೆ ಕೇಂದ್ರ ಹಾಗೂ ರಸ್ತೆ ಮೂಲಭೂತ ಸೌಕರ್ಯ ಇಂಜಿನಿಯರ್‌ಗಳೊಂದಿಗೆ ಸ್ಥಳ ಪರಿವೀಕ್ಷಣೆಗೆ ದಿನಾಂಕ ನಿಗದಿಪಡಿಸಲು ಸಭೆಯಲ್ಲಿ ಕೋರಿದರು.

3. ವಾರ್ಡ್ ವ್ಯಾಪ್ತಿಯ ಬಿ.ಟಿ.ಎಸ್ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗಗಳು ಒತ್ತುವರಿ ಮಾಡಿಕೊಂಡು ವ್ಯಾಪಾರ ವಹಿವಾಟು ಮಾಡುತ್ತಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೀವ್ರ ತರಹದ ತೊಂದರೆಯಾಗಿರುತ್ತದೆ ಎಂದು ಸಭೆಯಲ್ಲಿ ದೂರಿದರು–ಸಂಬಂಧಿಸಿದಂತೆ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಫುಟ್‌ಪಾತ್ ತೆರವು ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗುವುದು ಎಂದು ವಾರ್ಡಿನ ಇಂಜಿನಿಯರ್‌ರವರು ಸಭೆಗೆ ತಿಳಿಸಿದರು.

4. ವಾರ್ಡಿನ ವ್ಯಾಪ್ತಿಯ ವಿಲ್ಸನ್‌ಗಾರ್ಡನ್ ಏರಿಯಾದಲ್ಲಿ ಆಗಾಗ್ಗೆ ನೀರಿನ ಸಮಸ್ಯೆ ಉದ್ಭವಿಸುತ್ತಿದ್ದು, ಕ್ರಮ ಕೈಗೊಳ್ಳಲು ಸಭೆಯಲ್ಲಿ ಸಾರ್ವಜನಿಕರು ಕೋರಿದರು. ಸದರಿ ವಿಷಯದ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು ಮಾತನಾಡಿ ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆಗಳು ಬಾರದಂತೆ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

5. ವಾರ್ಡಿನ ವ್ಯಾಪ್ತಿಯ ಹೆಚ್. ಸಿದ್ದಯ್ಯ ರಸ್ತೆಯಲ್ಲಿ ಖಾಸಗಿ ಬಸ್ಸುಗಳು ಸಂಚರಿಸುತ್ತಿರುತ್ತವೆ. ಹಾಗೂ ರಸ್ತೆಯ ಉದ್ದದ ಅನೇಕ ಭಾಗಗಳಲ್ಲಿ ರಸ್ತೆಯ ಎರಡು ಕಡೆ ಪಾರ್ಕಿಂಗ್ ಮಾಡುತ್ತಿರುವುದರಿಂದ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಸಂಚಾರಿ ವಿಭಾಗದ ಪೊಲೀಸರು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.



Scanned with CamScanner

6. ವಾರ್ಡಿನ ವ್ಯಾಪ್ತಿಯ ವಿಲ್ಸನ್‌ಗಾರ್ಡನ್ 12ನೇ ಅಡ್ಡರಸ್ತೆ ಹಾಗೂ 3ನೇ ಮುಖ್ಯರಸ್ತೆಯ ಜಂಕ್ಷನ್‌ನಲ್ಲಿ ಕಟ್ಟಡದ ಅವಶೇಷಗಳು ಅನೇಕ ದಿನಗಳಿಂದ ಬಿದ್ದಿದ್ದು, ಸದರಿ ವಿಷಯದ ಬಗ್ಗೆ ಗಮನ ಹರಿಸಲು ಕೋರಿದರು–ಸದರಿ ರಸ್ತೆಯು ರಸ್ತೆ ಮೂಲಭೂತ ಸೌಕರ್ಯ ವಿಭಾಗ ರವರ ಕಾರ್ಯವ್ಯಾಪ್ತಿಗೆ ಒಳಪಡುತ್ತಿದ್ದು, ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಗುವುದು ಎಂದು ವಾರ್ಡಿನ ಇಂಜಿನಿಯರ್ ರವರು ಸಭೆಗೆ ತಿಳಿಸಿದರು.

7. ವಾರ್ಡಿನ ವಿಲ್ಸನ್‌ಗಾರ್ಡನ್ ಪ್ರದೇಶದಲ್ಲಿ ಹೂವಿನ ಅಂಗಡಿಗಳು ಹೆಚ್ಚಾಗಿದ್ದು, ಪಾರ್ಕಿಂಗ್ ಸರಿಯಾಗಿ ಮಾಡದೇ ಇರುವುದರಿಂದ ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗುತ್ತಿದ್ದು, ಪ್ರತಿದಿನ ಸಂಚಾರಿ ಪೊಲೀಸ್ ವಿಭಾಗದಿಂದ ಪರಿವೀಕ್ಷಿಸಲು ಸಭೆಯಲ್ಲಿ ಕೋರಿದರು– ಸಂಬಂಧಿಸಿದಂತೆ ಪ್ರತಿದಿನ ಅನೇಕ ವಾಹನಗಳಿಗೆ ಈಗಾಗಲೇ ದಂಡ ವಿಧಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

8. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2022–23ನೇ ಸಾಲಿನ ಆಯವ್ಯಯದಲ್ಲಿ ಪ್ರತಿ ವಾರ್ಡಿಗೆ ಚರಂಡಿ ಹಾಗೂ ಪಾದಚಾರಿ ಮಾರ್ಗಗಳ ದುರಸ್ಥಿಗಾಗಿ ಹಾಗೂ ವಾರ್ಷಿಕ ನಿರ್ವಹಣೆಗಾಗಿ ರೂ. 30.00 ಲಕ್ಷಗಳ ಅನುದಾನವನ್ನು ಮೀಸಲಿರಿಸಿದ್ದು, ಅದರಂತೆ ವಾರ್ಡ್ ಸಂಖ್ಯೆ: 145ಕ್ಕೆ ಸಂಬಂಧಿಸಿದಂತೆ **(Name of Work:** Annual Maintenance and Improvements of footpath and drains in Ward 145 **30.00 Lakhs)** ಈ ಕಾಮಗಾರಿಯನ್ನು ವಾರ್ಡ್ ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದು, ಸಭೆಯ ಅನುಮೋದನೆ ಪಡೆಯಲಾಯಿತು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ಸಂಬಂಧಪಟ್ಟ ಇಲಾಖಾವಾರು ಸಮನ್ವಯ ಸಾಧಿಸಿಕೊಂಡು ನಿರ್ವಹಿಸಲು ಎಲ್ಲಾ ಸಿಬ್ಬಂದಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner